ಈ ಬಾರಿ ಊರಿಗೆ ಹೋದಾಗಲೂ, ಅಷ್ಟಿಷ್ಟಾದರೂ ಹುಯ್ಯಬೇಕಿದ್ದ ಹಸ್ತೆ ಚಿತ್ತೆ ಮಳೆಗಳು ಕೈಕೊಟ್ಟಿದ್ದವು. ಹೀಗಾಗಿ ಸುತ್ತಣ ಬಯಲೆಲ್ಲ ಹಲ್ಲು ಕಿರಿದು, ದಾರಿ ಬದಿಯ ಕೋಲುಗಳ್ಳಿ, ಮುಂಡುಗಳ್ಳಿ, ಪಾಪಸು ಕಳ್ಳಿಗಳು ಮಾತ್ರ ಕೊಂಚ ಹಸಿರಾಗಿದ್ದವು. ಆಕಸ್ಮಾತ್ತಾಗಿಯೋ ತಸ್ಮಾತ್ತಾಗಿಯೋ ಈ ಬೋಳು ಗುಡ್ಡಗಳ ನಡುವೆ ಎದ್ದುಕೊಂಡ ಗ್ರಾಮಗಳಿಗೆಲ್ಲ ಕರಡಿ ಕಣಿವೆ, ಚಿರತೆ ಬಯಲು, ಸಲಗನ ವೊಡ್ಡು, ಮುಳ್ಳಂದಿ ಪೋಡು, ಜಿಂಕೆ ಮಾಳ ಎಂಬ ಹೆಸರುಗಳು ಯಾಕೆ ಬಂದವು ಅನ್ನುವ ಸಂದೇಹ ಹುಟ್ಟಿತು. ಸುಳ್ಳೋ ನಿಜವೋ ಅಂತೂ ಅಜ್ಜ, ದನುರ್ಮಾಸದ ರಾತ್ರಿಗಳಲ್ಲಿ ಅಗ್ಗಿಷ್ಟಿಕೆಯ ಮುಂದೆ ಕೈ ಮೈ ಕಾಯಿಸಿಕೊಳ್ಳುತ್ತ ಮಕ್ಕಳಾಗಿದ್ದ ನಮಗೆಲ್ಲ ಹೇಳುತ್ತಿದ್ದ ಸಂಗತಿ ನೆನಪಿಗೆ ಬಂತು.

ಊರು ಹುಟ್ಟಿಕೊಂಡಿರುವ ಈ ಕಡೆಯಲ್ಲೆಲ್ಲ ಹಿಂದೆ ದಟ್ಟ ಅರಣ್ಯ ಹುಟ್ಟಿಕೊಂಡಿತ್ತು. ಆನೆ, ಹುಲಿ, ಕರಡಿ, ಚಿರತೆ, ಮುಳ್ಳಂದಿ, ಜಿಂಕೆಯೇ ಮೊದಲಾಗಿ ಮಿಕಗಳು ಹಿಂಡು ಹಿಂಡಾಗಿ ವಾಸಮಾಡಿಕೊಂಡಿದ್ದವು. ಒಂದೊಂದು ಜಾತಿಯವೂ ಗುಂಪಾಗಿ ಕಾಡಿನ ಒಂದೊಂದು ಭಾಗದಲ್ಲಿ ವಾಸವಿದ್ದು ಒಂದರ ಬೇಟೆಗೆ ಇನ್ನೊಂದು ದಕ್ಕದಂತೆ ಅವುಗಳ ಪಾಡಿಗೆಂಬಂತೆ ಬದುಕಿದ್ದವು. ಕಾಲಾನುಕಾಲಕ್ಕೆ ಊರು ಎದ್ದು ಜನ ಕಾನಿನ ಗಿಡಮರಗಳನ್ನೂ, ನಡುವಣ ಜೀವಿಗಳನ್ನೂ ನಿರ್ನಾಮ ಮಾಡಿದರು. ಹೀಗಾಗಿ ಅರಣ್ಯದ ಯಾವ್ಯಾವ ಭಾಗದಲ್ಲಿ ಯಾವ್ಯಾವ ಮಿಕ ವಾಸವಾಗಿದ್ದಾವೋ ಆಯಾ ಗ್ರಾಮಕ್ಕೆ ಅದದೇ ಹೆಸರು ಉಳಿದುಕೊಂಡಿತಂತೆ.

ಇದರ ಜತೆಗೆ ಅಜ್ಜ ತಾನು ಬಹಳ ಹಿಂದೆ ಕುರಿ ದನಗಳ ಹಿಂದೆ ಕಾಡಿಗೆ ಹೋಗುತ್ತಿದ್ದ ಕಾಲದಲ್ಲಿ ಸಲಗ ಹುಲಿಯ ಕಣ್ಣಿಗೆ ಅಷ್ಟಿತಷ್ಟಿ ಬಿದ್ದರೂ ತಪ್ಪಿಸಿಕೊಂಡು ಊರು ಸೇರುತ್ತಿದ್ದುದರ ಸಾಹಸ ಬಣ್ಣಿಸುತ್ತಿದ್ದ, ಏನೇ ಆಗಲಿ ಹೆಣ್ಣು ಕರಡಿಯ ಕಣ್ಣಿಗೆ ಮಾತ್ರ ಯಾವಾಗಲೂ ಬಿದ್ದದ್ದೇ ಇಲ್ಲ ಅನ್ನುತ್ತಿದ್ದ. ಗಂಡು ಕರಡಿಯ ಕೈಗೆ ಹೆಂಗಸೂ, ಹೆಣ್ಣು ಕರಡಿಯ ಕೈಗೆ ಗಂಡಸೂ ಸಿಕ್ಕಿದರೆ ಅವು ಅನಾಮತ್ತು ಹೊತ್ತುಕೊಂಡು ಹೋಗಿ ತಮ್ಮ ಗುಹೆಯಲ್ಲಿಟ್ಟು ಹಣ್ಣು ಹಂಪಲು ತಂದುಕೊಟ್ಟು ಸಾಕಿ ಸಂಸಾರ ಮಾಡಿ ಮಕ್ಕಳು ಪಡೆಯುತ್ತವೆಂದು ಪರ್ಸಂಗ ಹೇಳುತ್ತಿದ್ದ. ಅಂಥ ಸಮಯದಲ್ಲಾದರೋ ನಾನು, ಮಾದೇವಿ, ಸಿವನಿಂಗ, ಚಿಕ್ಕಣ್ಣ ಎಲ್ಲ ಬೆಚ್ಚಿ ಬೆರಗಾಗುತ್ತಿದ್ದೆವು. ಮಾದೇವಿಯಂತೂ ಊರಾಚೆ ಕಾನಿನ ಕಡೆಗೆ ಹೋಗುವುದಿರಲಿ, ಬೀದಿಯನ್ನೂ ದಾಟುವುದಿಲ್ಲವೆಂದು ತೀರ್ಮಾನಿಸುತ್ತಿದ್ದಳು.

ಅಜ್ಜನ ಕರಡಿಯ ಪರ್ಸಂಗ ನೆನಪಾಗಿ ನಗು ಬರುವುದಕ್ಕೂ ನಾನು ಹುಟ್ಟಿ ಬೆಳೆದ ಗ್ರಾಮ ಕರಡಿ ಕಣಿವೆ ಸಿಕ್ಕಿದ್ದಕ್ಕೂ ಸರಿಹೋಯಿತು. ಊರ ಮಧ್ಯದ ಕಟ್ಟೆಯ ಅರಳಿಮರ, ಅದರ ಬದಿಯ ಮಾರಿಗುಡಿಯ ಗೋಪುರದ ಕಳಸ ಕಾಣಿಸಿತ್ತು. ಇಡೀ ಗ್ರಾಮದ ಮನೆ ಮನೆಯ ಕದ ಬಾಗಿಲು ಗೋಡೆ ಸುಣ್ಣ ಬಣ್ಣ ಕಾರಣೆ ಕಂಡಿದ್ದವು. ಮನೆ ಸೇರಿದೆ. ದೊಡ್ಡಮ್ಮ ಹಿಡಿದ ನೀರಿನ ಚರಿಗೆ ಈಸಿ ಮುಖದ ಬೆವರು ಕಾಲಿನ ದೂಳು ಕಳೆದುಕೊಂಡದ್ದಕ್ಕೆ ಭಾರ ಇಳಿದಂತಾಗಿ ಆರಾಮ ಎನಿಸಿತು. ಬುಡ್ಡಿಯ ಬೆಳಕಲ್ಲಿ ಉಂಡು ಎದ್ದೆ. ದೊಡ್ಡಮ್ಮ ನಾಳೆ ಊರ ದೇವತೆಯ ಹಬ್ಬವಿರುವುದಾಗಿ ಹೇಳಿದಳು. ಮಳೆ ಬೆಳೆ ತಪ್ಪಿದ್ದೇನೋ ನಿಜ. ತಾಯಿಯ ವ್ರತ ನಿಲ್ಲಿಸಲಾದೀತೆ? ಅವಳು ಇನ್ನೂ ಸಿಟ್ಟು ಮಾಡಿಕೊಂಡರೆ ವರ್ಷಕ್ಕೊಂದು ದಿನವಾದರೂ ಹುಯ್ಯುವ ಮಳೆಯೂ ತಪ್ಪೀತು. ಅದಕ್ಕೆ ಊರ ದೈವದವರು ಹಬ್ಬ ತಪ್ಪಿಸುವುದು ಬೇಡವೆಂದು ಗುಡಿಯ ಮುಂದೆ ಅಗ್ನಿಕಂಭ ನೆಟ್ಟಿದ್ದಾರೆ ಎಂದರು. ಗುಡಿಯ ಮುಂದೆ ಹುಡುಗರು ರಂಗ ಕುಣಿಯುವುದನ್ನಾದರೂ ನೋಡೋಣವೆಂದು ಎದ್ದು ಹೊರಟೆ.